ಫ್ಯಾಕ್ಟರಿ ಹತ್ತಿರ ಒಂದು ಬ್ರಿಡ್ಜ್ ಆಯಿತು. ಆ ಬ್ರಿಡ್ಜ್ ಏನಾದರೂ ಓಲ್ಡ್ ಮದ್ರಾಸ್ ರೋಡ್‌ನಲ್ಲಿ ಆಗದೇ ಇದ್ದರೆ ತುಂಬಾ ತೊಂದರೆಯಾಗುತ್ತದೆ. ಕಿಸಾನ್ ಫ್ಯಾಕ್ಟರಿಯಿಂದ ಮುಂದುಗಡೆ ಏನಾದರೂ ಬ್ರಿಡ್ಜ್ ಆಗಲಿಲ್ಲವೆಂದರೆ 2-3 ಕಿ. ಮೀ. ಗಳವರೆಗೆ ವೆಹಿಕಲ್ಸ್ ನಿಂತುಕೊಂಡು ಬಿಡುತ್ತಿತ್ತು. ಸೇಲಂ ರೂಟ್‌ನಲ್ಲೂ ಅದೇ ರೀತಿ ಆಗುತ್ತದೆ. ಅಲ್ಲಿ 3-4 ಬ್ರಿಡ್ಜ್ ಬರಬೇಕು. ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಈ ಕೆಲಸ ಶುರು ಮಾಡಲೇಬೇಕು. ಇದರ ಬಗ್ಗೆ ರೈಲ್ವೆ ಮಂತ್ರಿಗಳ ಗಮನ ಸೆಳೆಯಬೇಕು.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಸಂಕ್ಷಿಪ್ತವಾಗಿ ಹೇಳಬೇಕು. ಅಷ್ಟೊಂದು ಉದ್ದದ ಭಾಷಣ ಮಾಡಬೇಡಿ.

ಶ್ರೀ ಎನ್. ರಾಜಣ್ಣ : ಎರಡನೆಯದಾಗಿ, ಬೆಂಗಳೂರು ಸಿಟಿಯಿಂದ ಮದ್ರಾಸ್ ಲೈನ್ ವಿಚಾರ. ಮಾನ್ಯ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಎಲ್ಲಾ ಕಡೆ ಸೇತುವೆಗಳು ಬಂದವು. ಬೆಂಗಳೂರು ಈಸ್ಟ್ ಮತ್ತು ಚೈಕನಹಳ್ಳಿ ಹಾಗೂ ರಿಂಗ್ ರೋಡ್ ಕಡೆಗಳಲ್ಲಿ ಮೂರು ಕಡೆ ಸೇತುವೆಗಳು ಬರಬೇಕು. ಇವೆಲ್ಲಾ ಇನ್ಸ್‌ಪೆಕ್ಷನ್ ಆಗಿವೆ. ದಯವಿಟ್ಟು ಈ ಕೆಲಸಗಳನ್ನೆಲ್ಲಾ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಕೇಂದ್ರ ಸರ್ಕಾರವನ್ನು ಕಾಂಟ್ಯಾಕ್ಟ್ ಮಾಡಿ ಶುರು ಮಾಡಲಿಲ್ಲವೆಂದರೆ ಟ್ರಾಫಿಕ್ ಜಾಸ್ತಿಯಾಗಿ ಜನ ಒದ್ದಾಡುವಂತಹ ಪರಿಸ್ಥಿತಿ ಬರುತ್ತದೆ.

ಶ್ರೀ ಬಿ. ಎನ್. ಬಚ್ಚೇಗೌಡ(ಮಾನ್ಯ ಸಾರಿಗೆ ಸಚಿವರು) : ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವಂತಹ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಯ ರೈಲ್ವೆ ಇಲಾಖೆಗೆ ಸಂಬಂಧಪಟ್ಟಿದ್ದಾಗಿದೆ. ಇದರ ವಿಚಾರದಲ್ಲಿ ಸರ್ಕಾರದವರು ಕೋ-ಆರ್ಡಿನೇಟ್ ಮಾಡಿ ಜನರಲ್ ಮ್ಯಾನೇಜರ್‌ರವರ್ನು ಕರೆಸಿ ಮಾನ್ಯ ಶಿವರಾಜ್ ಹಾಗೂ ಮಾನ್ಯ ರಾಜಣ್ಣನವರು ಪ್ರಸ್ತಾಪಿಸಿರುವಂತಹ ವಿಷಯಗಳ ಬಗ್ಗೆ ಚರ್ಚೆ ಮಾಡಿ, ಎಲ್ಲಿ ವೈಡನಿಂಗ್ ಮಾಡಬೇಕು, ಎಲ್ಲಿ ಬ್ರಿಡ್ಜ್‌ಗಳನ್ನು ಕಟ್ಟಬೇಕು ಎಂಬುದನ್ನು ತ್ವರಿತವಾಗಿ ಮಾಡುವ ದೃಷ್ಟಿಯಿಂದ ಶಾಸಕರುಗಳನ್ನೂ ಸೇರಿಸಿ ಒಂದು ಸಭೆ ಕರೆಯುತ್ತೇನೆ. ಆ ಸಭೆಯಲ್ಲಿ ಚರ್ಚೆ ಮಾಡಿ ಮುಂದೆ ಆಗಬೇಕಾದಂತಹ ಕಾರ್ಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತದೆಂದು ತಿಳಿಸಬಯಸುತ್ತೇನೆ.

(ಕ) ಟಿಪ್ಪು ಸುಲ್ತಾನರ ಮರಿಮಕ್ಕಳ ಕುರಿತು

ಶ್ರೀ ಸೈಯ್ಯದ್ ಜುಲ್ಫಿಕರ್ ಹಶ್ಮಿ(ಬೀದರ್) : ಮಾನ್ಯ ಅಧ್ಯಕ್ಷರೇ, ಈ ದೇಶದ ಮೊಟ್ಟ ಮೊದಲನೇ ಸ್ವತಂತ್ರ ಸೇನಾನಿಯಾದ ಟಿಪ್ಪೂಸುಲ್ತಾನರ ಮರಿಮಕ್ಕಳು ಕರ್ನಾಟಕದಲ್ಲಿ ಬೀದಿ ಪಾಲಾಗುತ್ತಿದ್ದಾರೆ. ಅವರ ಮೇಲೆ ಕೇಸ್‌ಗಳನ್ನು ಹಾಕಲಾಗುತ್ತಿದೆ. ತಮಗೆ ಗೊತ್ತಿರುವಂತೆ ಅವರ ತಂದೆಯವರನ್ನು ಕರೆದುಕೊಡು ಬಂದವರು ಆಗಿನ ಸರ್ಕಾರದ ಒಬ್ಬ ಸಚಿವರು, ಈಗ ಇವರಿಗೆ ಕರೆದುಕೊಂಡು ಬಂದವರು ಈಗಿನ ಸರ್ಕಾರದ ಒಬ್ಬ ಸಚಿವರು. ಅವರನ್ನು ಇಲ್ಲಿಗೆ ಕರೆದುಕೊಂಡು ಬಂದರು. 1971ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ, ಮಾನ್ಯ ದೇವರಾಜ್‌ಅರಸ್‌ರವರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಅಜೀಜ್‌ಸೇಟ್‌ರವರು ಶ್ರೀರಂಗಪಟ್ಟಣದಲ್ಲಿ ಅವರನ್ನು ಕರೆಸಿ ಒಂದು ರ್ಯಾಲಿ ಮಾಡಿದರು. ಸಾಕಷ್ಟು ದುಡ್ಡು ಅವರಿಗೆ ರೀ-

ಹ್ಯಾಬಿಲಿಟೇಟ್ ಮಾಡುವ ಸಲುವಾಗಿ ಕಲೆಕ್ಟ್ ಆಯಿತು. ಆವರ್ನು ಕರೆಸಿ ಆಗಿನ ಸಚಿವರು ತಮ್ಮ ರಾಜಕೀಯಕ್ಕೆ ಏನೇನು ಉಪಯೋಗಿಸಿಕೊಳ್ಳಬೇಕೋ ಅದಕ್ಕೆ ಉಪಯೋಗಿಸಿಕೊಂಡರು. ಮತ್ತೆ ಅವರ ಮಗನನ್ನು ಕರೆದುಕೊಂಡು ಬಂದು ಸಾಕಷ್ಟು ಜನ ತಮ್ಮ ರಾಜಕೀಯಕ್ಕೆ ಉಪಯೋಗಿಸಿ ಕೊಳ್ಳುವುದು ಮತ್ತೆ ಅವರನ್ನು ಕಳುಹಿಸುವುದು. ಅವರು ಹೋಗುವುದಿಲ್ಲವೆಂದರೆ ಅವರ ಮೇಲೆ ಕೇಸ್‌ಗಳನ್ನು ಹಾಕುವುದು ನಡೆಯುತ್ತಿದೆ. ಮೊನ್ನೆ ಶ್ರೀರಂಗಪಟ್ಟಣದಲ್ಲಿ ಆಶಫ್ ಆಲಿ ಷಾ ಎಂಬುವವರ ಮೇಲೆ ಕೇಸ್ ಹಾಕಲಾಗಿದೆ. ಇದು ತಮಗೆಲ್ಲರಿಗೂ ಗೊತ್ತಿದೆ. ತಾವು ಏನೂ ಕೊಡಬೇಡಿ, ಶಾಲೆ ಕೊಡಬೇಡಿ, ಲ್ಯಾಂಡ್ ಕೊಡಬೇಡಿ. ಆ ವಕ್ಫ್ ಪ್ರಾಪರ್ಟಿಯಲ್ಲಿ ದರ್ಗ ಇದೆ. ಟಿಪ್ಪುಸುಲ್ತಾನ್ ಗುಂಬಸ್ ಇದೆ, ವಕ್ಫ್‌ನಲ್ಲಿ ಒಂದು ಆಕ್ಟ್ ಇದೆ ಯಾರು ಮುತವಲ್ಲಿಗಳು ಇರುತ್ತಾರೆ ಅವರು ಪರ್ಮಿಷನ್ ತೆಗೆದುಕೊಂಡು ವಕ್ಫ್ ಪ್ರಾಪರ್ಟಿ ಮ್ಯಾನೇಜ್ ಮಾಡುವುದು. ಪರ್ಮಿಷನ್ ಅವರು ಕೊಡಲಿಲ್ಲ. ಅಲ್ಲಿ ಸ್ವಲ್ಪ ಪ್ರಮಾಣದ ಇನ್‌ಕಮ್ ಬರುತ್ತದೆ. ಈಗ ಎರಡು ವರ್ಷಗಳಿಂದ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲ. ಮಕ್ಕಳಿಗೆ ಇರುವುದಕ್ಕೆ ಮನೆ ಇಲ್ಲ. ಬಸ್‌ಸ್ಟ್ಯಾಂಡ್‌ನಲ್ಲಿ ಇದ್ದಾರೆ. ಬಹಳ ಕಷ್ಟದ ಪರಿಸ್ಥಿತಿ ಇದೆ. ನಮ್ಮ ಶಾಸಕರಾದ ಮಾರುತಿ ಪವಾರ್‌ರವರೂ ಸಹಕಾರ ಮಾಡಿದ್ದಾರೆ. ಅವರ ಮೇಲೆ ಏನೇನಾಗಿದೆ ಅವರು ಹೇಳುತ್ತಾರೆ. ನಾನು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ,ಅವರಿಗೆ ಒಂದು ಆಶ್ರಯ ಸ್ಕೀಮ್‌ನಲ್ಲಿ ಆದರೂ ಒಂದು ಆಶ್ರಯ ಮಾಡಿಕೊಡಿ. ತಮ್ಮ ಸರ್ಕಾರಕ್ಕೆ ದೊಡ್ಡ ಹೆಸರು ಬರುತ್ತದೆ. ಶ್ರೀರಂಗಪಟ್ಟಣದಲ್ಲಿ 1971ರಿಂದ ಇಷ್ಟು ಜನ ಇದ್ದಾರೆ. ಇಲ್ಲಿ ಮುಸ್ಲಿಂ ರಾಜಕಾರಣಿಗಳು ನಾನು ಅವರ ಹೆಸರು ಹೇಳುವುದಿಲ್ಲ. ತಮ್ಮ ರಾಜಕೀಯವನ್ನು ನಡೆಸಿ ಆ ಕುಟುಂಬಕ್ಕೆ ಅನ್ಯಾಯ ಮಾಡಿದ್ದಾರೆ. ಸರ್ಕಾರದವರು ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಅವರು ಆತಂಕದ ಬಗ್ಗೆ ಆಡಿರುವ ಮಾತಿನ ಬಗ್ಗೆ ನಾನೂ ಕೂಡ ಸಹಮತ ಇದ್ದೇನೆ. ಆದರೆ ರಾಜಕೀಯಕ್ಕಾಗಿ ಅವರನ್ನು ಬಳಸಿಕೊಳ್ಳುತ್ತೀರಿ, ಎಂದು ಹೇಳಿದರು ಆದರೆ ಇವರು ಮಾತನಾಡುವುದು ಯಾರಿಗಾಗಿ? ಇವರೂ ರಾಜಕೀಯಕ್ಕಾಗಿ ಮಾತನಾಡುತ್ತಾರೆ.

ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಮಾನ್ಯ ಅಧ್ಯಕ್ಷರೆ, ಟಿಪ್ಪು ಸುಲ್ತಾನ್‌ರವರ ಏಳನೇ ವಂಶಸ್ಥರಿದ್ದಾರೆ ಎನ್ನುವ ವಿಚಾರದ ಬಗ್ಗೆ ಹಶ್ಮಿಯವರು ಏನು ಹೇಳಿದರು ಇದರ ಬಗ್ಗೆ ನನಗೆ ಬಹಳ ಅನುಭವ ಇದೆ. ಅವರು ಗುಂಬಸ್‌ನಲ್ಲಿ ವಾಸ ಮಾಡುವವರಿಗೆ ಕರೆದುಕೊಂಡು ಬಂದರು ಎನ್ನುವ ವಿಚಾರ ಹೇಳಿದರು, ಅವರು ಗುಂಬಸ್‌ನ್ನು ಹುಡುಕಿಕೊಂಡು ಅವರು ಏನು ಸಂಸಾರ ಎಲ್ಲರ ಸಹಾಯದಿಂದ ಮಾಡಿಕೊಂಡು ಬರುತ್ತಿದ್ದರು, ಅವರನ್ನು ಪೋಲಿಸ್ ಅಧಿಕಾರಿಗಳು ಮೂರು ಗಂಟೆ ರಾತ್ರಿಯಲ್ಲಿ ಅವರನ್ನು ಏಕಾಏಕಿ ಹೊರಗಡೆ ತೆಗೆದು ಬಿಸಾಕಿ 20 ಮೀಟರ್ ಸುತ್ತಳತೆಯಲ್ಲಿ ತಾವು ಒಳಗೆ ಹೋಗಬಾರದು ಎನ್ನುವ ಹಿನ್ನಲೆಯಲ್ಲಿ ಬಂಧನ ನಿರ್ಮಾಣ ಮಾಡಿದರು. ಆ ಸಂದರ್ಭದಲ್ಲಿ ನಾವು ಮತ್ತೆ ನಮ್ಮ ಕೆಲವು ಅಲ್ಪ ಸಂಖ್ಯಾತ ನಾಯಕ ಬಾಂಧವರು ಅಲ್ಲಿಹೋಗಿ

ಅಲ್ಲಿ ಒಂದು ಗುಡಿಸಲು ಹಾಕಿ ವಾಸ ಮಾಡತಕ್ಕಂತಹ ವಿಚಾರವನ್ನು ನಾವೆಲ್ಲ ಪ್ರಸ್ತಾಪ ಮಾಡಿ ವ್ಯವಸ್ಥೆ ಮಾಡಿದೆವು. ಆನಂತರ ಅಲ್ಲಿಯೂ ಕೂಡ ಅವರು ಇರಬಾರದು ಎನ್ನುವ ಹಿನ್ನೆಲೆಯಲ್ಲಿ ತಹಶೀಲ್ದಾರ್‌ರವರು ಅವರು ಶ್ರೀರಂಗ ಪಟ್ಟಣದ ಒಳಗಡೆಯೇ ಬರಬಾರದು ಎಂದು ಹೇಳಿದ್ದಾರೆ, ಮ್ಯಾಜಿಸ್ಟ್ರೇಟ್ ಇನ್ನೊಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಅವರು ಪ್ರತಿವಾರ ಬಂದು ಶ್ರೀರಂಗಪಟ್ಟಣದಲ್ಲಿರುವ ಪೋಲಿಸ್ ಠಾಣೆಯಲ್ಲಿ ಬಂದು ಸಹಿ ಮಾಡಬೇಕು. ಈ ರೀತಿಯಾದ ದ್ವಂದ್ವವಾದ ಒಂದು ಜಡ್ಜ್‌ಮೆಂಟನ್ನು ಕೊಟ್ಟು, ಇವತ್ತು ಅವರು ಹೇಗಾಗಿದ್ದಾರೆಂದರೆ, ಅವರು ಪಾರ್ಕ್‌ನಲ್ಲಿ, ರಸ್ತೆಯಲ್ಲಿ ಏಲ್ಲೋ ಜೀವನ ಮಾಡುವಂತಹ ಒಂದು ಪರಿಸ್ಥಿತಿಯಾಗಿದೆ. ಸರ್ಕಾರ ಟಿಪ್ಪುಸುಲ್ತಾನರ 200ನೇ ವರ್ಷದ ಜಯಂತಿ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಈ 200ನೇ ವರ್ಷದ ಶತಮಾನೋತ್ಸವ ಬದಲಿಗೆ ಇದನ್ನು ನಿಲ್ಲಿಸಿ ಆ ವಂಶಸ್ಥರು ಏನಿದ್ದಾರೆ ಅವರಿಗೆ ಗೌರವ ನೀಡಿ ಸರಿಯಾದ ನೆಲೆ ಮಾಡಿದರೆ ಒಳ್ಳೆಯದು ಎನ್ನುವ ವಿಚಾರ ಹೇಳುತ್ತೇನೆ. ಪೋಲಿಸ್ ಅಧಿಕಾರಿಗಳು ಹೋಗಿ ಅನಾವಶ್ಯಕವಾಗಿ ಅವರಿಗೆ ಹಿಂಸೆ ಕೊಡುವುದು. ಕಿರುಕುಳ ಕೊಡುವುದು. ಇದಕ್ಕೆ ಬದಲಾಗಿ ಅವರಿಗೆ ಒಂದು ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ಮತ್ತು ಮೈಸೂರು ಹುಲಿ ಎಂದು ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ ಟಿಪ್ಪುಸುಲ್ತಾನ್ ಎಂದು ನಾವು ಏನು ಹೇಳುತ್ತೇವೆ ಅದಕ್ಕೆ ಒಂದು ಗೌರವ ಸಿಗುತ್ತದೆ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ದೇಶದ ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದಂತಹ ಟಿಪ್ಪುಸುಲ್ತಾನ್‌ರವರ ಆ ವ್ಯವಸ್ಥೆ, ಆ ಶ್ರೀರಂಗಪಟ್ಟಣ, ಆ ಸಮಾಜ ನೋಡಿದರೆ ಏನೋ ಒಂದು ತರಹ ವೈಭವ. ಹಳೆಯ ಕಾಲದ ಇತಿಹಾಸ ಎದ್ದು ಕಾಣುತ್ತಿದೆ, ತನ್ನ ಮಕ್ಕಳನ್ನೇ ಒತ್ತೆ ಇಟ್ಟು ದೇಶಕ್ಕಾಗಿ ಹೋರಾಟ ಮಾಡಿದ ಸ್ವಾತಂತ್ರ್ಯ ಸೇನಾನಿ ಅವರ ಮರಿ ಮಗ ಬಂದರೆ ಅವರಿಗೆ ಒಂದು ಸಣ್ಣ ಜಾಗ ಕೊಡದೆ ಹೊರಗೆ ಹಾಕುತ್ತೇವೆ ಎನ್ನುವ ವ್ಯವಸ್ಥೆ ಸರಿಯಾದ ಮಾರ್ಗ ಅಲ್ಲ. ಸರ್ಕಾರವೇ ಅವರಿಗೆ ಗೌರವ ಕೊಟ್ಟು ಎಲ್ಲ ರೀತಿಯ ವ್ಯವಸ್ಥೆ ಮಾಡಬೇಕಾಗಿತ್ತು. ಶ್ರೀರಂಗಪಟ್ಟಣದಲ್ಲೇ ಮಾಡಬೇಕು. ಶ್ರೀರಂಗಪಟ್ಟಣದಲ್ಲಿ ಮಾಡದೆ, ಮೈಸೂರಿಗೆ ಹೋದರೆ ಅಲ್ಲಿಯೂ ಭಯ ಭೀತಿ ಹುಟ್ಟಿಸಿ ಪೋಲಿಸರು ಕಿರುಕುಳ ಕೊಡತಕ್ಕಂಥದ್ದು ಸರಿಯಲ್ಲ. ಇಲ್ಲಿ ನಾವು ಹೇಳುತ್ತೇವೆ, ಇಡೀ ವರ್ಷವೆಲ್ಲಾ ಟಿಪ್ಪುಸುಲ್ತಾನರ ವರ್ಷವೆಂದು ಮಾಡಬೇಕು ಎನ್ನತಕ್ಕಂಥದ್ದನ್ನೆಲ್ಲ ನಾವು ಯೋಚನೆ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಮರಿ ಮಗ ಎನ್ನುವುದರಲ್ಲಿ ಅನುಮಾನವೇ ಇಲ್ಲ. ತಮ್ಮಲ್ಲಿ ನಾನು ಮನವಿ ಮಾಡುತ್ತೇನೆ, ಮಾನ್ಯ ಗೃಹ ಸಚಿವರು ಮತ್ತು ಸರ್ಕಾರ ಅದಕ್ಕೆ ಒಂದು ತೀರ್ಮಾನ ಮಾಡಿ ಅವರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಎಲ್ಲ ರೀತಿಯ ಬೆಂಬಲ ಮತ್ತು ಗೌರವ ಕೂಟ್ಟು, ಅವರಿಗೆ ಗೌರವ ಕೊಟ್ಟರೆ, ಸರ್ಕಾರಕ್ಕೆ ಗೌರವ ಬಂದ ಹಾಗೆ. ಆ ದೃಷ್ಟಿಯಿಂದ ಅವರು ಉಳಿದುಕೊಳ್ಳುವುದಕ್ಕೆ ಎಲ್ಲ ರೀತಿಯಿಂದ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ನಮಗೆಲ್ಲರಿಗೂ ಸಹಿತ ಟಿಪ್ಪುಸುಲ್ತಾನರ ಬಗ್ಗೆ ಯಾವುದೇ ವಿವಾದ ಇಲ್ಲದೆ ಅತ್ಯಂತ ಗೌರವವಿರುವ ವಿಚಾರ. ಅವರು ಹೇಳತಕ್ಕಂತಹ ಅವಶ್ಯಕತೆ ಇಲ್ಲ. ತಾವು ಅವರ ವಂಶಸ್ಥರಿಗೆ ಯಾವ ರೀತಿ ನಾವು ರಕ್ಷಣೆ ಕೊಡಬೇಕು, ರಿಹ್ಯಾಬಿಲಿಟೇಟ್ ಮಾಡಬೇಕು, ಮತ್ತು ಅವರ ಅವಶ್ಯಕತೆ ಏನು ಎನ್ನುವ ಬಗ್ಗೆ ಇನಿಶಿಯೇಟೀವ್ ತೆಗೆದುಕೊಂಡು ಮಾನ್ಯ ಹಶ್ಮಿಯವರನ್ನು ಈಗಾಗಲೇ ಸಭೆಯಲ್ಲಿ ಆಯ್ಕೆಮಾಡಿದ್ದೀರಿ. ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಹಶ್ಮಿಯವರು ಈ ವಿಚಾರದಲ್ಲಿ ಬಹಳ ಆಸಕ್ತಿಯನ್ನು ವಹಿಸಿ ಅವರ ವಂಶಸ್ಥರು ಎಂದು ಹೇಳತಕ್ಕಂತಹ ವಾದವನ್ನು ಮಂಡಿಸಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಪವಾರ್‌ರವರು. ಹಿರಿಯರಾದ ವಾಟಾಳ್ ನಾಗರಾಜ್‌ರವರು ಈ ವಿಚಾರವನ್ನು ಹೇಳಿದ್ದಾರೆ. ನಾನಾದರೂ ಇಷ್ಟೇ ಹೇಳತಕ್ಕಂಥದ್ದು. ನಾನು ಗೃಹ ಸಚಿವನಾಗುವುದಕ್ಕೆ ಮುಂಚೆ ಇದರ ಬಗ್ಗೆ ಅನೇಕಾನೇಕ ವಿಚಾರಗಳನ್ನು ತಿಳಿದುಕೊಂಡಿರಲಿಲ್ಲ. ತಾವು ಸಭೆಯನ್ನು ಮಾಡಿದ ನಂತರ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಮೊದಲನೆಯದಾಗಿ ಅವರ ಕುಟುಂಬದವರು, ಅವರ ಮನೆತನದವರು ಎನ್ನುವುದನ್ನು ಎಸ್ಟಾಬ್ಲಿಷ್ ಮಾಡಬೇಕಾಗುತ್ತದೆ. ಕಲ್ಕತ್ತ ಹೈಕೋರ್ಟಿನಲ್ಲಿರುವಂತಹ ಒಂದು ತೀರ್ಪನ್ನು ತಂದು ಅವರು ನಮ್ಮ ಮುಂದೆ ಕೊಟ್ಟಿದ್ದಾರೆ. ಆದ್ದರಿಂದ ನಾನು ಇವತ್ತು ಅಧಿವೇಶನ ಮುಗಿದ ನಂತರ ನಮ್ಮ ಅಧಿಕಾರಿಗಳು, ಕಾನೂನು ಇಲಾಖೆಯ ಕಾರ್ಯದರ್ಶಿಗಳು ಮತ್ತು ಸಚಿವರು, ಜಿಲ್ಲಾ ಮಂತ್ರಿಗಳಾದ ಶ್ರೀಮಾನ್ ನಾಗೇಗೌಡರು, ಈಗ ಅವರನ್ನು ರಿಹ್ಯಾಬಿಲಿಟೇಟ್ ಮಾಡುವುದಾದರೆ ಶ್ರೀರಂಗಪಟ್ಟಣದಲ್ಲಿ ಮಾಡಬೇಕಾಗುತ್ತದೆ. ಶ್ರೀರಂಗ ಪಟ್ಟಣದಲ್ಲಿ ಪರಿಸ್ಥಿತಿ ಏನಿದೆ, ಆ ಪ್ರಾಪರ್ಟಿ ವಕ್ಫ್ ಬೋರ್ಡಿಗೆ ಸೇರಿದೆಯೋ, ಗವರ್ನಮೆಂಟ್‌ಗೆ ಸೇರಿದೆಯೋ ಮತ್ತು ಅವರಿಗೆ ಯಾವ ರೀತಿ ರಿಹ್ಯಾಬಿಲಿಟೇಟ್ ಮಾಡಬೇಕು, ಏನು ಮಾಡಬೇಕು, ಎನ್ನುವುದರ ಬಗ್ಗೆ ತೆರೆದ ಮನಸ್ಸು ಸರ್ಕಾರಕ್ಕಿದೆ ಎನ್ನುವ ಮಾತನ್ನು ಮಾತ್ರ ನಾನು ಹೇಳಬಲ್ಲೆ. ಅವರಿಗೆ ಕಿರುಕುಳ ಕೊಡತಕ್ಕಂಥದ್ದು ಅವರ ಮೇಲೆ ಕೇಸ್ ಹಾಕಿರತಕ್ಕಂಥದ್ದು ಈ ಪರಿಸ್ಥಿತಿ ಇದ್ದರೆ, ಯಾವುದೇ ಒಬ್ಬ ಭಾರತೀಯನಿಗೂ ಕೂಡ ಅನ್ಯಾಯವಾಗಿ ನಾವು ಕಿರುಕುಳ ಕೊಡತಕ್ಕಂಥದ್ದು, ತೊಂದರೆ ಕೊಡತಕ್ಕಂಥದ್ದು ಕೇಸ್‌ಗಳನ್ನು ಹಾಕತಕ್ಕಂಥದ್ದು ಸರಿಯಲ್ಲ. ಇದನ್ನು ನಾನು ಒಪ್ಪುತ್ತೇನೆ. ಆದ್ದರಿಂದ, ಆ ರೀತಿ ಏನಾದರೂ ಆಗಿದ್ದರೆ ಅದನ್ನು ಬಗೆಹರಿಸತಕ್ಕಂತಹ ಭರವಸೆಯನ್ನು ತಮ್ಮ ಮೂಲಕ ನಾನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಪಿ. ಆರ್. ಸಗೀರ್‌ಅಹಮದ್ : ಅವರು ಗುಂಬಸ್‌ನಲ್ಲಿ ಪ್ರವೇಶ ಮಾಡಿದರು. ಪ್ರವೇಶ ಮಾಡಿದಾಗ ಮಾನ್ಯ ನಮ್ಮ ಗೃಹ ಸಚಿವರು ಹೇಳಿದ್ದಾರೆ. ಅವರ ಮೇಲೆ ಪೋಲಿಸ್ ಮೊಕದ್ದಮೆಯಾಗಿದೆ ಆ ಮೊಕದ್ದಮೆಯನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾವು ಆಶ್ವಾಸನೆ ಕೊಡಬೇಕು.

SRT. P.G.R. SINDHIA : Government is having an open mind on this issue.

ತಮಗೆ ಇದರಲ್ಲಿ ಏನಿದೆ ಎನ್ನುವುದನ್ನು ವಿಚಾರ ಮಾಡೋಣ. If he is really his successor,ಅವರು ನಿಜವಾಗಿ ಅವರ ವಂಶಸ್ಥರಾಗಿದ್ದರೆ ಇಡೀ ಸದನ ಎಲ್ಲರೂ ಸೇರಿ ಮಾಡೋಣ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಮಾರುತಿರಾವ್ ಪವಾರ್‌ರವರು ರಾಜಕೀಯವಾಗಿ ಅವರಿಗೆ ಸಹಾಯ ಮಾಡಿದ್ದಾರೆ. ಆ ಮೀಟಿಂಗ್‌ನಲ್ಲಿ ಪವಾರ್‌ರವರಿಗೂ ಕರೆದಿದ್ದರು, ನಾನೂ ಹೋಗಿದ್ದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಪವಾರ್‌ರವರು ರಾಜಕೀಯವಾಗಿ ಮಾಡಿದ್ದಾರೆ ಎನ್ನುವುದು ನಾನು ಹೇಳಲಿಲ್ಲ. ಅವರು ಮಾಡಿರುವುದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸಿದ್ದೇನೆ.

(ಖ) ಹೇಮಾವತಿ ನೀರಿನ ಬಗ್ಗೆ

+ **ಶ್ರೀ ಎಸ್.ಪಿ. ಮುದ್ದ ಹನುಮೇಗೌಡ** (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಹೇಮಾವತಿ ನೀರಿನ ಬಗ್ಗೆ ಭಾರೀ ನೀರಾವರಿ ಸಚಿವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಹೇಮಾವತಿ ನಮ್ಮ ಜಿಲ್ಲೆ ಮತ್ತು ನಮ್ಮ ಕ್ಷೇತ್ರದಲ್ಲಿ ಬರ್ನಿಂಗ್ ಇಶ್ಯೂ ಆಗಿದೆ. ಬಹುಶಃ ಅನೇಕ ಸಲ ನಾವು ಪ್ರಸ್ತಾಪ ಮಾಡಿದ್ದೇವೆ. ನಾನು ಪದೇ ಪದೇ ಹೇಳುತ್ತಿರುವುದರಿಂದ ನನಗೂ ಅಷ್ಟು ಸಮಾಧಾನವಿಲ್ಲ. ಆದರೆ ಚಾಮರಾಜನಗರ ಕುಣಚೂರು ರಸ್ತೆ ಅಷ್ಟು ವಿಷಯ ನಾನು ಪ್ರಸ್ತಾಪ ಮಾಡಿಲ್ಲ. ಬಹಳ ಸಾರಿ ಪ್ರಸ್ತಾಪ ಮಾಡಿದ್ದೇವೆ ಆದರೂ ಆಗಿಲ್ಲವೆಂದು ತಮಗೆ ಉದಾಹರಣೆ ಕೊಡುತ್ತಿದ್ದೇನೆ. ಸನ್ಮಾನ್ಯ ನಾಗೇಗೌಡರು ಭಾರೀ ನೀರಾವರಿ ಸಚಿವರಾಗಿದ್ದಾಗ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ತಾವು ಅನೇಕ ಸಾರಿ ಭರವಸೆ ಕೊಟ್ಟಂತಹ ರೀತಿಯಲ್ಲಿ ಇಷ್ಟೊತ್ತಿಗಾಗಲೇ ನಮ್ಮ ತಾಲ್ಲೂಕಿನವರೆಗೆ ನೀರು ಬರುತ್ತದೆ ಎಂದು ಬಹಳ ಕುತೂಹಲವಾಗಿದ್ದೆವು. ಈಗ ಏನಾಗಿದೆ ದುರಾದೃಷ್ಟವಶಾತ್ ಸಂಪೂರ್ಣವಾಗಿ ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಕಾಮಗಾರಿಗಳು ಕುಂಠಿತವಾಗಿವೆ. ಕುಂಠಿತವಾಗಿರುವ ಬಗ್ಗೆ ಇತ್ತೀಚಿನ ಉದಾಹರಣೆ ಏನೆಂದರೆ, ನೀವು ಈ ಬಡ್ಜೆಟ್‌ನಲ್ಲಿ ಕೇವಲ 45 ಕೋಟಿ ರೂಪಾಯಿಗಳನ್ನು ಇಟ್ಟು, ಕಳೆದ ವರ್ಷ 95 ಕೋಟಿ ರೂಪಾಯಿಗಳನ್ನು ಇಟ್ಟು ಈ ವರ್ಷ 45 ಕೋಟಿ ರೂಪಾಯಿಗಳನ್ನು ಇಟ್ಟು, ಈ ಹೇಮಾವತಿ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಗಿಸತಕ್ಕಂತಹ ಆಸಕ್ತಿ ಸರ್ಕಾರಕ್ಕಿಲ್ಲ ಅನ್ನುವಂತಹದ್ದನ್ನು ತಾವು ತೋರಿಸುತ್ತಿದ್ದೀರಿ. ದಯಮಾಡಿ ಈ ಬಗ್ಗೆ ತಾವು ಏನಾದರೂ ಆಸಕ್ತಿ ವಹಿಸಿ ಕಾಮಗಾರಿಗಳಿಗೆ ಹೆಚ್ಚಿನ ಹಣ ಒದಗಿಸಿ ತಾವು ಮುಗಿಸತಕ್ಕಂತಹ ಆಸಕ್ತಿ ಇದೆಯಾ ಒಂದು, ಎರಡನೆಯದು ತಮಗೆ ಅದೇ ವಿಷಯದಲ್ಲಿ ಇನ್ನೊಂದು ನೋಟೀಸ್ ಕೊಟ್ಟಿದ್ದೇನೆ, ಹೆಬ್ಬೂರು, ಗೂಳೂರು ಮತ್ತು ನಾಗವಲ್ಲಿ ಕೆರೆಗಳು ಏನು ನಮ್ಮ ಕ್ಷೇತ್ರದಲ್ಲಿ ಬರುತ್ತವೆ. ಆ ಪ್ರದೇಶದಲ್ಲಿ ಬಹಳ ಅನ್ಯಾಯವಾಗಿದೆ ಎಂದು ಜನರು ಬಹಳಷ್ಟು ಹೋರಾಟ ಮಾಡುತ್ತಿದ್ದಾರೆ. ಆ ಕೆರೆಗಳಿಗೆ ನೀರು ಕೊಡುವುದಕ್ಕೆ ತಾವು ಈಗಾಗಲೇ ಕೆಲವು ಸಾಫ್ಟ್ ಕಾರ್ನರ್ ಎನ್ನುವುದನ್ನು ತಾವು ಅನೇಕ ಸಲ ಪ್ರಸ್ತಾಪ ಮಾಡಿದ್ದೀರಿ. ಆ ಬಗ್ಗೆ ಸರ್ಕಾರ ಏನು ಚಿಂತನೆ ಮಾಡಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಮ್ಮ ಸರ್ಕಾರ ತುಮಕೂರಿಗೆ 500 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿದೆ. ಇದೊಂದೇ ನೈಜತೆಯನ್ನು ಎತ್ತಿತೋರಿಸುತ್ತದೆ, ಅಂದರೆ ತುಮಕೂರು ಮತ್ತು ಕುಣಿಗಲ್‌ಗೆ ನೀರನ್ನು ಕೊಡುವುದಕ್ಕೆ ಸರ್ಕಾರದ ಆಸಕ್ತಿಯನ್ನು ಈ ಅಂಕಿಅಂಶ ಎತ್ತಿತೋರಿಸುತ್ತದೆ. ನಾವು 1997ರ ಜೂನ್‌ಗೆ